ಹೋಗುತ್ತಿದ್ದುದರಿಂದ ಅದು ಅವಳಿಗೆ ಕಷ್ಟವೇನೂ ಅನ್ನಿಸಲಿಲ್ಲ. ಆದರೆ ಗಂಡ ದುಡಿಯಲು ಒಪ್ಪಿಕೊಳ್ಳುವ ಕೆಲಸಗಳ ಬಗ್ಗೆ ಆಶ್ಚರ್ಯಪಡುತ್ತಿದ್ದಳು. ಅಂತಹ ಕೆಲಸಗಳನ್ನೆ ಅವನು ಯಾಕೆ ಒಪ್ಪಿಕೊಳ್ಳುತ್ತಾನೋ ತಿಳಿಯದು. ಎಲ್ಲೆಲ್ಲಿಯೋ ದೂರ ದೂರ ಇರುವ ಆಳವಾದ ಬಾವಿ ಕಡಿಯುವುದು, ದೆವ್ವಿನಂತಿರುವ ದೊಡ್ಡ ದೊಡ್ಡ ಗಿಡಮರಗಳನ್ನು ಕಡಿಯುವುದು, ಬೃಹತ್ತಾದ ಬಂಡೆಗಳನ್ನು ಒಡೆಯುವುದು ಮಾಡುತ್ತಿದ್ದ. ತಳ ಕಾಣದ ಪಾತಾಳಕ್ಕೆ ಇಳಿಯುವುದು, ಮುಗಿಲು ಮುಟ್ಟಿರುವ ತೆಂಗಿನಮರವನ್ನು ಏರುವುದು, ಬೆನ್ನು ಬಾಗಿದ್ದರೂ ಚೀಲಗಟ್ಟಲೆ ಜೋಳ ಹೊತ್ತು ತರುವುದನ್ನು ಗಂಡ ಮಾಡುತ್ತಿದ್ದರೆ ಈಕೆಗೆ ಕೋಪ ಬರುವುದು, ಕನಿಕರವೆನಿಸುವುದು. ಕೇಳಿದರೆ ಅದಕ್ಕೆ ಡಬಲ್ ಪಗಾರ ಕೊಡುತ್ತಾರೆ, ಇಷ್ಟು ದುಡ್ಡು ಯಾರು ಕೊಡುತ್ತಾರೆ ಎಂದು ಬಾಯಿ ಮುಚ್ಚಿಸುವನು. ದಣಿದು ಸುಸ್ತಾಗಿ ಮಲಗಿದರೆ ಹಗಲು ಯಾವುದೋ ರಾತ್ರಿ ಯಾವುದೋ ಆತನಿಗೆ ತಿಳಿಯುತ್ತಿರಲಿಲ್ಲ. ಎಚ್ಚರಾದ ಕೂಡಲೆ ಮಾಲಿಕರದೆ ಕೆಲಸದ ಜಪ. ತಾನು ನೋಡಿದರೆ ಸಣಕಲು, ಮೈಯಲ್ಲಿ ಅಷ್ಟು ಶಕ್ತಿಯಿಲ್ಲ. ಗೂರುತ್ತಾನೆ. ಆದರೆ ಅವರು ಹೇಳಿದ ಕೆಲಸಗಳನ್ನು ಚಾಚೂ ತಪ್ಪದೆ ಮುಗಿಸಿಕೊಡುವನು. ಅವಳು ಏನಾದರೂ ಹೇಳಿದರೆ 'ನನಗ ಉಪದೇಶ ಮಾಡಲಿಕ್ಕೆ ಬರಬ್ಯಾಡ ನೀನು, ನಿಂದೇನೈತಿ ಅಷ್ಟ ನೀ ನೋಡ್ಕೊ' ಎಂದು ಆಕೆಯ ಬಾಯಿಗೆ ಬೀಗ ಹಾಕುವನು. 'ಮನ್ಯಾಗ ಇದ್ರ ಯಾವಾಗಲೂ ನಿಂದು ಕಿಟಿಕಿಟಿ ಇದ್ದದ್ದ..' ಸಂಜೆಯ ಹೊತ್ತು ಹೊರಗೆ ಹೊರಡುವನು. ತಾನು ಏನೇ ಮಾತಾಡಿದರೂ ಅದನ್ನವನು ನೆಪವಾಗಿ ಬಳಸಿ ಹೊರಗೆ ಹೊರಡುವನು. ಕೆಲವು ವರ್ಷಗಳಲ್ಲಿಯೇ ಆತ ಸೋತುಹೋದ. ಎಷ್ಟು ಬೇಗ ಅವನನ್ನು ವೃದ್ಧಾಪ್ಯ ಆವರಿಸಿತು ಎಂದು ಅವಳು ಚಿಂತಿಸುವಳು. ಹೆಣ್ಣುಕೂಸು ಆವಾಗಲೆ ಸತ್ತುಹೋಯಿತು. ಮಗ ಇನ್ನೂ ಸಣ್ಣವನಿದ್ದಾನೆ. ತನಗೆ ಸಹಾಯವಾಗಲಿ ಎಂದು ಈತ ಎಳಸು ಮಗನನ್ನು ಕರೆದುಕೊಂಡು ಹೋಗುವುದನ್ನು ಜಗಳ ಮಾಡಿ ತಡೆದಳು. ಹುಡುಗ ಕುತೂಹಲದಿಂದ ಹೂಂ ಅನ್ನುತ್ತಾನೆ. ಆದರೆ ಅಪ್ಪನಿಗೆ ತಿಳಿಯಬೇಡವೇ!

ಮಗನನ್ನು ಬೆಳೆಸಬೇಕು, ದೊಡ್ಡವನನ್ನಾಗಿಸಬೇಕು. ಆಳ ಬಾವಿಗೆ ಇಳಿದು ಹೋಗದಂತೆ ಮಗನನ್ನಾದರೂ ಕಾಪಾಡಬೇಕು. ಪಾರವ್ವ ನೂರು ಯೋಚನೆಯಲ್ಲಿ ಬಸವಳಿಯುವಳು. ತಾನು ಇನ್ನೂ ನೂರು ಬಾವಿಗಳನ್ನು ಕಡಿಯುತ್ತೇನೆ, ಗಡಗಡ ಎಂದು ಗುಡ್ಡಗಳನ್ನೆ ಬೀಳಿಸುತ್ತೇನೆ ಎಂದು ಹೇಳುತ್ತಿದ್ದ ಗಂಡ ಒಂದು ಸಲ ಆರಾಮವಿಲ್ಲವೆಂದು ಮಲಗಿದವನು ಎಷ್ಟೋ ದಿನ ಹಾಗೆ ಮಲಗಿಯೇ ಇದ್ದ. ಹಾಗೆ ಹಾಸಿಗೆ ಹಿಡಿದಾಗಲೂ ಮರ ಕಡಿಯುವ ಕಾಂಟ್ರಾಕ್ಟರ್‌ಗಳನ್ನು ತೆಗೆದುಕೊಳ್ಳುತ್ತಿದ್ದ. 'ನನಗ ಆರಾಮ ಆಗಲಿ ತಡೀರಿ... ಅದೆಷ್ಟ ಹೊತ್ತಿನ ಮಾತು. ಒಂದ ದಿನದಾಗ ಕಡದ ಕೊಡ್ತೀನಿ..' ಗಂಡನ ಮಾತುಗಳನ್ನು ಅವಳಿಗೆ ನಗು ಬರುವದು. ಅವನು ಅಡ್ವಾನ್ಸ್ ಇಸಿದುಕೊಂಡ ರೊಕ್ಕವನ್ನು ತಾನು ದುಡಿದು ತೀರಿಸಬೇಕಾಗುತ್ತದೆಯೇನೋ ಎಂದು ಅವಳು ಭಯದಿಂದ ಊಹಿಸಿಕೊಂಡಿದ್ದು ಕೊನೆಗೆ ನಿಜವಾಗಿ ಪರಿಣಮಿಸಿತು. ಗಂಡ ಸಂಪೂರ್ಣ ಹಾಸಿಗೆ ಹಿಡಿದ ಮೇಲೆ ಆಕೆ ಒಬ್ಬಳೆ ದುಡಿಯಬೇಕಾಯಿತು. ಐದು ವರ್ಷದ ಹಿಂದೆ ಆತ ತೀರಿಹೋದ. ಅವನಿಗೆ ನಲವತ್ತು ಕೂಡ ಆಗಿರಲಿಲ್ಲ. ಆದರೆ ಕೆಮ್ಮು, ಅಸ್ತಮಾ, ಅಶಕ್ತತನ ಐವತ್ತು ದಾಟಿದ್ದವರಂತೆ ತೋರಿಸುತ್ತಿದ್ದವು. ಸರಕಾರಿ ದವಾಖಾನೆಯಲ್ಲಿ ವಾರಕ್ಕೊಮ್ಮೆ ತೋರಿಸುತ್ತಿದ್ದ. ಅಲ್ಲಿ ಸರಿ ನೋಡುವುದಿಲ್ಲವೆಂದೂ ಡಾಕ್ಟರ್ ಚೆನ್ನಾಗಿಲ್ಲವೆಂದೂ ಗಂಡ ಹೇಳುತ್ತಿದ್ದ. ಸಾಲ ಮಾಡಿ ದೊಡ್ಡ ದವಾಖಾನೆಗೆ ತೋರಿಸಿದರೂ ಆತ ಉಳಿಯಲಿಲ್ಲ. ವೈದ್ಯರು ಯಾವುದೇ ಆರೈಕೆ ಮಾಡುವುದಿಲ್ಲವೆಂದೂ ಸುಮ್ಮನೆ ರೊಕ್ಕ ಜಗ್ಗುತ್ತಾರೆಂದೂ ಹೇಳಿದ. ಡಾಕ್ಟರರು ಮಾತ್ರ 'ಪಾರವ್ವ, ನಿನ್ನ ಗಂಡಗ ನೂರು ಚಟ, ಮೊದಲು ಸಿಗರೇಟ್ ಸೇದೋದನ್ನ ಬಿಡು ಅಂತ ಹೇಳು' ಎನ್ನುತ್ತಿದ್ದರು. ಯಾರಿಗೆ ಹೇಳುವುದು? ಗಂಡನಿಗೆ ಹೇಳಿದರೆ ಅವನಿಗೆ ಸಿಟ್ಟು. ದವಾಖಾನೆಯವರಿಗೆ ಹೇಳಿದರೆ ಅವರಿಗೆ ಇನ್ನಿಲ್ಲದ ಕೋಪ. 'ಈ ಪೇಶಂಟ್‌ನ ಮನಿಗೆ ಕಳಿಸಿಬಿಡ್ರಿ. ಅಂವೇನು ಉಳಿಯುವಂಗ ಕಾಣಂಗಿಲ್ಲ' ಒಂದು ದಿನ ಅವರು ಕರುಣೆಯಿಲ್ಲದವರಂತೆ ಹೇಳಿ ಮನೆಗೆ ಕಳಿಸಿದರು. ಗಂಡ ದವಾಖಾನೆಯಲ್ಲಿ ಸತ್ತನೋ, ಮನೆಗೆ ಬಂದು ಸತ್ತನೋ ಪಾರವ್ವನಿಗೆ ಕೊನೆಗೂ ತಿಳಿಯಲಿಲ್ಲ.

ಈಗ ಪರಮೇಶಿಯೇ ಅವಳ ಪಾಲಿನ ಪ್ರಪಂಚವಾಗಿದ್ದ. ಮಗನಾದರೂ ಚೆನ್ನಾಗಿ ಓದಲಿ ಎಂದು ಅವನನ್ನು ಓದಿಸುತ್ತಿದ್ದಾಳೆ. ಪರಮೇಶಿ ಹುಟ್ಟುವ ಮೊದಲೇ ಅವಳಿಗೆ ಒಂದು ಹೆಣ್ಣು ಮಗುವಿತ್ತು. 'ಹುಡುಗಿ ಎಷ್ಟು ಮುದ್ದಾಗೈತಿ ಅಲ್ಲ ಪಾರೀ, ಗೌರವ್ವ ಎದ್ದು ಬಂದಾಂಗ' ಎಂದು ಈಕೆಯ ಅವ್ವ ಅಂದಿದ್ದಕ್ಕೆ ಅದೇ ಹೆಸರು ಕಾಯಂ ಆಯಿತು. ಆದರೆ ಮಗಳು ಗೌರಿ ಹುಟ್ಟಿನ ಜೊತೆಗೆ ಬೇನೆಯನ್ನು ಬೆನ್ನಿಗೆ ಕಟ್ಟಿಕೊಂಡು ಬಂದಿದ್ದಳು. ಹುಡುಗಿಗೆ ಕಾಲು ಬೇರೆ ಇರಲಿಲ್ಲ. ಪೋಲಿಯೋ ಆಗಿತ್ತು ಎಂದು ನಂತರ ತಿಳಿಯಿತು. ಇಂದು ನಡೆದಾಳು, ನಾಳೆ ನಡೆದಾಳು ಎಂದು ತಾಯಿ ಕಾಯ್ದದ್ದೆ ಬಂತು. ಆ ಹುಡುಗಿ ತೆವಳಿಕೊಂಡೆ ಆಡುತ್ತಿದ್ದಳು. ತೆವಳಿಕೊಂಡೆ ರೊಟ್ಟಿ ಮಾಡುವಲ್ಲಿಗೆ ಬರುತ್ತಿದ್ದಳು. ಗಂಡನೂ ಕೆಲಸಕ್ಕೆ ಹೋಗುತ್ತಿದ್ದುದರಿಂದ ಆಕೆ ದುಡಿಯಲು ಹೋದಲ್ಲೆಲ್ಲ ಆ ಹುಡುಗಿಯನ್ನು ಕರೆದುಕೊಂಡು ಹೋಗಬೇಕಿತ್ತು. ಆದರೆ ಗೌರಿ ಬಹಳ ದಿನ ಬದುಕಲಿಲ್ಲ. ಆ ಕೂಸು ಬದುಕದಿದ್ದುದೇ ಒಳ್ಳೆಯದಾಯಿತು ಎಂದು ಒಮ್ಮೊಮ್ಮೆ ಆಕೆ ಆಲೋಚಿಸಿದ ಸಂದರ್ಭಗಳು ಇರುತ್ತಿದ್ದವು. ಯಾಕೆಂದರೆ ಅದು ಬದುಕಿದ್ದರೆ ಅದನ್ನು ಕಟ್ಟಿಕೊಂಡು ದುಡಿಯಲು ಹೆಣಗಬೇಕಿತ್ತು ಎಂದುಕೊಳ್ಳುವಳು.

ಪರಮೇಶಿ ಯಾವಾಗಲಾದರೂ ಹಟ ಮಾಡುತ್ತ ಬೇಗ ಮಲಗದಿದ್ದಾಗ ಅವನಿಗೆ ಉಣ್ಣಿಸಿ, ತಿನ್ನಿಸಿ ಅವನನ್ನು ನಗಿಸುವಳು. ಯಾವುದೋ ಕತೆ ಹೇಳಿ ಅವನನ್ನು ಬೆಚ್ಚಿ ಬೀಳಿಸುವಳು. ನಡುನಡುವೆ ಗೌರಿಯ ಕತೆ ಹೇಳುವಳು. ಆಕೆ ಇದ್ದಿದ್ದರೆ ಅವನನ್ನು ಮುದ್ದು ಮಾಡುತ್ತಿದ್ದಳೇನೋ ಎಂದು ಕಣ್ಣಿನ ಹನಿ ಜಾರಿಸುವಳು. ಪರಮೇಶಿಗೂ ಆಗ ಅಳು ಬರುವುದು. 'ಯಪ್ಪಾ ಪರಮೇಶಿ, ನೀನು ಮಗ ಮತ್ತು ಮಗಳು ಎರಡೂ ಇದ್ದಂಗ. ನಿನ್ನ ಕಣ್ಣ ನೋಡಿದ್ರ ಥೇಟ್ ಗೌರವ್ವನ ಕಣ್ಣು ನೋಡಿದಂಗ ಆಗ್ತದ' ಮಗನ ಕಣ್ಣುಗಳಿಂದ ಇಲ್ಲವಾಗಿರುವ ಮಗಳನ್ನು ಅರಸುವಳು. ಅವನು ಸಣ್ಣವನಿದ್ದಾಗ, ಇನ್ನೂ ಜಡೆ ಇಳಿಸದ ಮೊದಲು, ಅವನ ಉದ್ದ ಕೂದಲಿಗೆ ಎರಡು ಜಡೆ ಹಾಕಿ, ಹೆರಳನ್ನು ಮುಂದೆ ಇಳಿಬಿಟ್ಟು, ಫ್ರಾಕು ತೊಡಿಸಿ ಹಣೆಗೆ ಸಣ್ಣ ಟಿಕಳಿಯಿಟ್ಟು ತೆಗೆಸಿದ ಫೋಟೋವನ್ನು ಜೋಪಾನವಾಗಿ ಕಬ್ಬಿಣದ ಸಂದುಕದಲ್ಲಿಟ್ಟಿದ್ದಾಳೆ. ಮದುವೆ ಮುಂಜಿವೆಗೆ ಹೋಗುವಾಗಲೊಮ್ಮೆ, ಮದುವೆಯ ರೇಷ್ಮೆ ಸೀರೆ ಉಡುವಾಗಲೊಮ್ಮೆ ಆ ಚಿತ್ರವನ್ನು ಮಾತ್ರ ಎವೆಯಿಕ್ಕದೆ ನೋಡುವಳು. ಹಿಂದಿನದನ್ನು ನೆನೆಸಿ ಹಿತ್ತಲದಲ್ಲಿ ಅತ್ತರಂತೆ ಎಂದು ಬರೀ ಹಿಂದಿನದನ್ನು ನೆನೆದರೆ ಮನೆ ಹೇಗೆ ನಡೆದೀತೆಂಬ ವಿಚಾರ ಬರುವುದು. ಆಕೆ ಮತ್ತೆ ಎಲ್ಲ ಮರೆತು ತನ್ನ ಕೆಲಸದಲ್ಲಿ ತೊಡಗುವಳು.

ಮಾವಿನ ಕಾಯಿ ಇಳಿಸುವ ಸುಗ್ಗಿ ಬಂತೆಂದರೆ ಪಾರವ್ವಳಿಗೆ ವಿಪರೀತ ಕೆಲಸ. ಅವಳ ಹಾಗೆ ಕಾಯಿ ಇಳಿಸುವುದು, ಬಟ್ಟಿಗೆ ಹಾಕಿ ಹಣ್ಣು ಮಾಡುವುದು ಬೇರೆಯವರಿಗೆ ಬರುತ್ತಿರಲಿಲ್ಲ. ಕೆಲವು ಮಂದಿಗೆಲ್ಲ ಅವಳೇ ಲೀಡರ್ ಆಗಿದ್ದಳು. ಅವಳ ಸುಪರ್ದಿಯಲ್ಲಿ ತಯಾರಾಗುವ ಮಾವಿನ ಹಣ್ಣುಗಳಿಗೆ ಲೆಕ್ಕವಿಲ್ಲದಷ್ಟು ಬೇಡಿಕೆ. ಕೆಲವರು ಪೌಡರ್ ಸಿಂಪಡಿಸಿಯೋ ಮತ್ತೆ ಕೆಲವರು ಯಾವುದೋ ರಾಸಾಯನಿಕ ಔಷಧಿ ಹೊಡೆದು ಪೇಟೆಗೆ ಒಯ್ಯುತ್ತಿದ್ದರು. ಸಾದಾ ಹಣ್ಣುಗಳನ್ನು ಕೂಡ ಕಲಮಿ, ರಸಪುರಿ, ಆಪೂಸ್ ಅಂತ ಮಾರುತ್ತಿದ್ದರು. ಆದರೆ ಒಳ್ಳೆಯ ಜಾತಿಯ ಮಾವು ಬೇಕಾದರೆ ಪಾರವ್ವನನ್ನು ಕರೆದುಕೊಂಡು ಹೋದರೆ ಸಾಕು ಎಂಬ ಮೆಚ್ಚುಗೆಯನ್ನು ಆಕೆ ಗಳಿಸಿದ್ದಳು. ಕೆಲವು ಹೊಲದ ಮಾಲಿಕರು ಪಾರವ್ವನಿಗೆ ಗುತ್ತಿಗೆ ಕೊಟ್ಟು ಆರಾಮವಾಗಿರುತ್ತಿದ್ದರು. ಆವಾಗಲೇ ಅವಳು ಒಂದಿಷ್ಟು ದುಡ್ಡು ಮಾಡಿ ವರ್ಷವಿಡೀ ಬದುಕು ಸಾಗಿಸಬೇಕು. ತಾಯಿ ಮಾವಿನ ಸುಗ್ಗಿಗೆ ಹೊರಟರೆ ಮಗ ಬೆನ್ನು ಹತ್ತುತ್ತಿದ್ದ. ಮನೆಯಲ್ಲಿಯೇ ಬೇಕಾದಷ್ಟು ಮಾವಿನಹಣ್ಣು ಇದ್ದರೂ ಅವನು ಗಿಡದಲ್ಲಿ

## ಕಣ್ಣು

ಇಳೆಗೆ ಬಿದ್ದ ಮಳೆಯನ್ನು
ಹೀರಿದ್ದು ಮಣ್ಣು!
ಬಿತ್ತಿದ ಬೀಜದ
ಮೊಳಕೆಗೂ ಇತ್ತು
ಕಣ್ಣು!

★ ದೇವಕಿಸುತ



ಈಶ್ವರ